
5-11-2005 METRO PAGE

# 38 ಸಾವಿರ ಮಕ್ಕಳಿಗೆ ಅನ್ನ ದಾಸೋಹ

**ಇಂದಿರಾನಗರದ 'ಮೊಹಿಸಿನ್ ಷರೀಫ್ ಎಜುಕೇಷನಲ್ ಅಂಡ್ ಚಾರಿಟಬಲ್ ಟ್ರಸ್ಟ್' ಕಳೆದ ನಾಲ್ಕು ವರ್ಷಗಳಿಂದ 133 ಕನ್ನಡ, 43 ಉರ್ದು, 4 ತಮಿಳು, 2 ಇಂಗ್ಲಿಷ್ ಮತ್ತು ಒಂದು ತೆಲುಗು ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ಬಿಸಿಯೂಟ ಉಣ ಬಡಿಸುತ್ತಿದೆ.**



ಹೆಗಲಿಗೆ ಚೀಲ ಹಾಕಿಕೊಂಡೇ ಹೊಟ್ಟೆಯ ಚೀಲವನ್ನು ತುಂಬಿಸಿಕೊಳ್ಳುತ್ತಿರುವ ಕಂದಮ್ಮಗಳು

ಹಸಿವಿನಿಂದ ಬಳಲುತ್ತಿರುವ ಮಕ್ಕಳಿಗೆ ಅನ್ನ ಹಾಕಿ, ಅಕ್ಷರ ಜ್ಞಾನ ನೀಡಲು ಹಲವಾರು ಸೇವಾ ಸಂಸ್ಥೆಗಳು ಶ್ರಮಿಸುತ್ತಿವೆ. ಇಂದಿರಾನಗರದ 'ಮೊಹಿಸಿನ್ ಷರೀಫ್ ಎಜುಕೇಷನಲ್ ಅಂಡ್ ಚಾರಿಟಬಲ್ ಟ್ರಸ್ಟ್' ಕಳೆದ ನಾಲ್ಕು ವರ್ಷಗಳಿಂದ ಪ್ರಾಥಮಿಕ ಶಾಲಾ ಮಕ್ಕಳಿಗೆ ಮಧ್ಯಾಹ್ನ 'ಬಿಸಿಯೂಟ' ನೀಡುತ್ತಾ ಬಂದಿದೆ.

ಪ್ರಸ್ತುತ 183 ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಶಾಲೆಗಳ 38 ಸಾವಿರ ಮಕ್ಕಳಿಗೆ ಪ್ರತಿನಿತ್ಯ ಮಧ್ಯಾಹ್ನದ ಊಟ ನೀಡುತ್ತಿದೆ. ಇದಕ್ಕಾಗಿ ನಿತ್ಯ 3,700 ಕೆಜಿ ಅಕ್ಕಿ ಬಳಕೆಯಾಗುತ್ತಿದೆ.

ಸರ್ಕಾರ ನೀಡುವ ಅಕ್ಕಿಯನ್ನು ಯಂತ್ರ ಬಳಸಿ ಸ್ವಚ್ಛ ಮಾಡಿ, ಅಕ್ಕಿಯಲ್ಲಿರುವ ಇಲಿ ಹಿಕ್ಕೆ, ಕಸಕಡ್ಡಿ, ಕಲ್ಲು, ಮೊಳೆ, ಕಬ್ಬಿಣದ ಚೂರುಗಳನ್ನು ಬೇರ್ಪಡಿಸಲಾಗುತ್ತದೆ. ಅನ್ನ, ಚಿತ್ರಾನ್ನ, ಸಾಂಬಾರ್ ಮತ್ತು ರಸಂ ತಯಾರಿಸಲು ನುರಿತ ಅಡುಗೆ ಭಟ್ಟರನ್ನು ನೇಮಿಸಿದ್ದು, ಶುಚಿತ್ವದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಲಾಗಿದೆ.

ಸಿದ್ಧಪಡಿಸಿದ ಊಟವನ್ನು ಕೃಷ್ಣರಾಜಪುರದಿಂದ ಕೆಂಗೇರಿ ಹತ್ತಿರದ ದಂತರಪಾಳ್ಯದ ವ್ಯಾಪ್ತಿಯ 183 ಶಾಲೆಗಳಿಗೆ ವಾಹನಗಳಲ್ಲಿ ರವಾನಿಸಲಾಗುತ್ತದೆ. ಆಯಾ ಶಾಲೆಗಳವರು ಅದನ್ನು ಮಕ್ಕಳಿಗೆ ಬಡಿಸುತ್ತಾರೆ.

'ಯಾರಿಂದಲೂ ಹಣದ ರೂಪದ ನೆರವಿಗೆ ಸ್ವೀಕರಿಸುವುದಿಲ್ಲ. ಆದರೆ ತರಕಾರಿ, ಬೇಳೆ, ಎಣ್ಣೆ, ಸಾಂಬಾರು ಪುಡಿ ಮತ್ತಿತರ ಪದಾರ್ಥಗಳನ್ನು ತೆಗೆದುಕೊಳ್ಳುತ್ತೇವೆ. ಬೇಡವೆಂದರೂ ಬಿಡದ ನಿವೃತ್ತ ಐಎಎಸ್ ಅಧಿಕಾರಿ ಪ್ರತಿ ತಿಂಗಳೂ 100 ರೂ. ಕಳಿಸಿಕೊಡುತ್ತಾರೆ. ಅಂಚೆ ಇಲಾಖೆ ನಿವೃತ್ತ ನೌಕರರೊಬ್ಬರು 500 ರೂ. ಡಿಡಿ ಕಳಿಸಿದ್ದಾರೆ. ಹೀಗೆ ಅನೇಕರು ಸ್ಪಂದಿಸುತ್ತಿದ್ದಾರೆ. ಪ್ರಸಕ್ತ ಸಾಲಿನಲ್ಲಿ 2 ಲಕ್ಷ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ವಿಸ್ತರಿಸುವ ಗುರಿ ಹೊಂದಿದ್ದೇವೆ' ಎನ್ನುತ್ತಾರೆ ಸಂಸ್ಥೆಯ ಅಧ್ಯಕ್ಷ ಮೊಹಿಸಿನ್ ಷರೀಫ್.

ಇಲ್ಲಿ ನಾಲ್ಕು ಚಾರಿಟಬಲ್ ಸಂಸ್ಥೆಗಳಿವೆ. ವ್ಯಾಪಾರ, ವಹಿವಾಟಿನಲ್ಲಿ ಬರುವ ಲಾಭದ ಶೇಕಡ 50ರಷ್ಟನ್ನು ಸೇವಾಕಾರ್ಯಗಳಿಗೆ ವಿನಿಯೋಗಿಸಲಾಗುತ್ತದೆ. ಆಗಾಗ ಜೈಲುಗಳಿಗೆ ತೆರಳಿ ಕೈದಿಗಳಿಗೆ ಊಟ, ಹಿರಿಯ ನಾಗರಿಕರಿಗೆ

...ಇಂಗ್ಲಿಷ್ ಮತ್ತು ಒಂದು ತೆಲುಗು ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ಬಿಸಿಯೂಟ ನೀಡಲಾಗುತ್ತಿದೆ. ಬೀಡಿ ಮಕ್ಕಳು, ಚಿಂದಿ ಆಯುವವರ ಮಕ್ಕಳು ಸೇರಿದಂತೆ ಕೂಲಿ ನಾಲಿ ಮಾಡುವವರ ಮಕ್ಕಳೇ ಈ ಶಾಲೆಗಳಲ್ಲಿ ಹೆಚ್ಚಾಗಿದ್ದಾರೆ. ಅನ್ನದ ಆಸೆಗಾಗಿಯೇ ಶಾಲೆಯ ಮೆಟ್ಟಿಲು ತುಳಿಯುವ ಈ ಕಂದಮ್ಮಗಳು ಸಹಜವಾಗಿ ಅಕ್ಷರ ದಾಸೋಹಕ್ಕೆ ಒಗ್ಗಿಕೊಳ್ಳುತ್ತಿರುವುದು ಹೊಸ ಬೆಳವಣಿಗೆ. (ಉದಾ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ತ್ರಿವೇಣಿನಗರ, ಕೆ.ಆರ್.ಪುರಂ).

ಟ್ರಸ್ಟ್‌ನಲ್ಲಿ ಹಿಂದು, ಮುಸ್ಲಿಂ, ಕ್ರಿಶ್ಚಿಯನ್, ಪರಿಶಿಷ್ಟರು ಸೇರಿದಂತೆ ವಿವಿಧ ಸಮಾಜದ ಧರ್ಮದರ್ಶಿಗಳಿದ್ದಾರೆ. ಅಡುಗೆ ಮಾಡುವುದರಿಂದ ಹಿಡಿದು ಬಿಸಿಯೂಟದ ಎಲ್ಲ ಕೆಲಸಗಳಲ್ಲಿ ವಿವಿಧ ಸಮುದಾಯದವರು ಒಂದಾಗಿ ದುಡಿಯುತ್ತಿರುವುದು ಇಲ್ಲಿನ ವಿಶೇಷ. ಒಟ್ಟು 15 ವಾಹನಗಳು ಮತ್ತು 75 ಜನ ಕೆಲಸಗಾರರಿದ್ದಾರೆ.

'ಮೂರು ವರ್ಷಗಳ ಹಿಂದೆ 'ಬಿ ನೆಗೆಟಿವ್ ರಕ್ತ'ದ ಅಭಾವದಿಂದಾಗಿ ನನ್ನ ಪತ್ನಿ ಅಸುನೀಗಿದರು. ಅದಕ್ಕಾಗಿ ಅವರ ಹೆಸರಿನಲ್ಲಿ 'ಯಾಸ್ಮಿನ್ ಮೆಮೋರಿಯಲ್ ಚಾರಿಟಬಲ್ ಟ್ರಸ್ಟ್' ಆರಂಭಿಸಿ 'ರಕ್ತದ ನಿಧಿ' ಸ್ಥಾಪಿಸುತ್ತಿದ್ದೇವೆ. ಯಾರೇ ಸಂಪರ್ಕಿಸಲಿ ಅವರಿಗೆ ಉಚಿತವಾಗಿ 'ಬಿ ನೆಗೆಟಿವ್ ರಕ್ತ' ಒದಗಿಸಲಾಗುವುದು. ಐಎಎಸ್, ಐಪಿಎಸ್ ಸೇರಿದಂತೆ ಉನ್ನತ ವ್ಯಾಸಂಗ ಮಾಡುವ ಪ್ರತಿಭಾವಂತ ಬಡ ಮಕ್ಕಳಿಗೆ ಎಲ್ಲ ರೀತಿಯ ಆರ್ಥಿಕ ನೆರವು ನೀಡಲಾಗುವುದು' ಎನ್ನುವ ಮೊಹಿಸಿನ್ ಷರೀಫ್, ಬಡವರಿಗಾಗಿ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ ಆರಂಭಿಸಲೂ ಸಿದ್ಧತೆ ನಡೆಸಿದ್ದಾರೆ.

'ಸರ್ಕಾರ ನೀಡುವ ಕಳಪೆ ದರ್ಜೆ ಅಕ್ಕಿಯ ಬಗ್ಗೆ ಸರ್ಕಾರ ಮತ್ತು ಭಾರತೀಯ ಆಹಾರ ನಿಗಮಕ್ಕೆ ಪತ್ರ ಬರೆದಿದ್ದೇವೆ. ಲೋಕಾಯುಕ್ತಕ್ಕೂ ದೂರು ನೀಡಿದ್ದೇವೆ. ಸದ್ಯದಲ್ಲೇ ನ್ಯಾಯಾಲಯಕ್ಕೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಿದ್ದೇವೆ' ಎನ್ನುತ್ತಾರೆ ಮೊಹಿಸಿನ್ ಬೇಸರದಿಂದ.

■ ಜಿ.ಜಿ.ನಾಗರಾಜ

